ನಿನ್ನಾಗಿದೆ. ಈ ಗುತ್ತಿಗೆಗಳನ್ನು ಜಿಲ್ಲಾಧಿಕಾರಿ ಬೆಳಗಾಂ, ಇವರು ದಿನಾಂಕ 21-01-1999ರ ನಡವಳಿಯ ಮೇರೆಗೆ ಗುತ್ತಿಗೆಯನ್ನು ನೀಡಲಾಗಿದೆ.

ಔರಾದ್ ತಾಲ್ಲೂಕಿನಲ್ಲಿ ಸೋನಾಳ ತೋರಣಾ ಹಾಗೂ ದಾಬಕಾ ಗ್ರಾಮಗಳಲ್ಲಿ ಹಾಸ್ಟೆಲ್ ನಿರ್ಮಾಣ

796 (1166) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವರು ಬೀದರ್ ಪ್ರವಾಸದಲ್ಲಿ ಜಿಲ್ಲಾ ಪರಿಷತ್ತು ಸಭೆಯಲ್ಲಿ, ಔರಾದ ತಾಲ್ಲೂಕಿನಲಿ ಸೋನಾಳ ತೊರಣಾ ಹಾಗೂ ದಾಬಕಾ ಗ್ರಾಮಗಳಲ್ಲಿ ಎಸ್.ಸಿ. ಮತ್ತು ಎಸ್.ಟಿ. ಮೆಟ್ರಿಕ್-ಪೂರ್ವ ಹಾಸ್ಟೆಲ್ ಮಂಜೂರಿ ಮಾಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹಾಸ್ಟೆಲ್ ಮಂಜೂರಾತಿ ಹಾಗೂ ನಿರ್ಮಾಣಕ್ಕಾಗಿ ಕೈಗೊಂಡ ಕ್ರಮವೇನು;

ಇ) ಈ ವರ್ಷಕ್ಕಾದರೂ ಸರ್ಕಾರ ಹಾಸ್ಟೆಲ್‌ಗಳನ್ನು ಪ್ರಾರಂಭಿಸುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಜಿಲ್ಲೆಯಿಂದ ಸೋನಾಳ ತೋರಣಾ ಹಾಗೂ ಡಾಬಕಾ ಗ್ರಾಮಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸೂಕ್ತ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಮೈಸೂರು ತಾಲ್ಲೂಕಿನಲ್ಲಿ ಗಣಿ ಕೈಗಾರಿಕೆಗಳು

798 (848) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿ ನೊಂದಾಯಿಸಲಾಗಿರುವ ಗಣಿ ಕೈಗಾರಿಕೆಗಳು ಎಷ್ಟು

ಆ) ಮೈಸೂರು ತಾಲ್ಲೂಕಿನಲ್ಲಿ ಗುರುತಿಸಿರುವ ಖನಿಜಗಳು ಯಾವುವು, ಇದರ ಉತ್ಪಾದನೆಗತ ಸರ್ಕಾರ ಕೈಗೊಂಡಿರುವ ಕ್ರಮಗಳೇನ;

ಇ) ಅಕ್ರಮ ಗಣಿಗಾರಿಕೆ ಬೆಳಕಿಗೆ ಬಂದಿರುವ ಪ್ರಕರಣಗಳು ಎಷ್ಟು?

ಈ) ಅನಧಿಕೃತ ಗಣಿಗಾರಿಕೆ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಮೈಸೂರು ತಾಲ್ಲೂಕಿನಲ್ಲಿ ಗ್ರಾನೈಟ್ ಅಲಂಕಾರಿಕ ಕಲ್ಲುಗಳು ತಯಾರಿಸಲು 6